# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಮಳವಳ್ಳಿ

## ಸಿ.ಸಿ ನಂ. 209/2018

ಪ್ರಾಸಾ – 2 ಚಾಸಾ – 5

ಸಾಕ್ಷಿಯನ್ನು ದಿಃ 24.02.2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ಮಹದೇವಸ್ವಾಮಿ ಎಂ |
| ತಂದೆಯ / ಗಂಡನ ಹೆಸರು | ಮಹದೇವು |
| ವಯಸ್ಸು | 39 ವರ್ಷ |
| ಉದ್ಯೋಗ | ಮುಖ್ಯ ಪೇದೆ, ಮಳವಳ್ಳಿ ಪುರ ಪೋಲೀಸ್ ಠಾಣೆ |
| ವಾಸ | ಮಳವಳ್ಳಿ ಟೌನ್ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ**

1. ನಾನು 2014 ರಿಂದ 2021 ರವರೆಗೆ ಹಲಗೂರು ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 12.06.2017 ರಂದು ಮಧ್ಯಾಹ್ನ 03.30 ರ ಸಮಯದಲ್ಲಿ ಚಾಸಾ.1 ರವರು ನನ್ನನ್ನು ಮತ್ತು ಚಾಸಾ.4 ರವರನ್ನು ಕರೆಸಿ ಮುತ್ತುರಾಜು ಎನ್ನುವವರು ತಮ್ಮ ಬಾಬ್ತು ಕೆಎ–11/ವೈ–2741 ರ ದ್ವಿಚಕ್ರವಾಹನದಲ್ಲಿ ಮದ್ಯ ಸಾಗಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದಿರುವುದಾಗಿ ತಿಳಿಸಿರುತ್ತಾರೆ. ಅದರಂತೆ ನಾವು 3 ಜನ ನಮ್ಮ ಬೈಕುಗಳಲ್ಲಿ ಪ್ರತ್ಯೇಕವಾಗಿ ಮುತ್ತತ್ತಿ ಸರ್ಕಲ್ ಗೆ ಹೋಗಿ ಅಲ್ಲಿದ್ದ ಚಾಸಾ.2 ಮತ್ತು 3 ರವರನ್ನು ಪಂಚರಾಗಿ ಬರಲು ಕೋರಿಕೊಂಡು ಅವರನ್ನು ನಮ್ಮ ಬೈಕುಗಳಲ್ಲಿ ಕೂರಿಸಿಕೊಂಡು ಸಂಜೆ 04.00 ರ ಸಮಯದಲ್ಲಿ ಮುತ್ತತ್ತಿ ಅರಣ್ಯ ಚೆಕ್ ಪೋಸ್ಟ್ ಬಳಿ ಹೋದಾಗ ಒಬ್ಬ ವ್ಯಕ್ತಿ ತನ್ನ ದ್ವಿಚಕ್ರ ವಾಹನದ ಟ್ಯಾಂಕ್ ಮೇಲೆ ಪ್ಲಾಸ್ಟಿಕ್ ಬ್ಯಾಗ್ ನ್ನು ಇಟ್ಟುಕೊಂಡಿದ್ದನು. ನಂತರ ಸದರಿ ವ್ಯಕ್ತಿಯನ್ನು ನಾವು 3 ಜನ ಹಿಡಿದು ಹೆಸರು ವಿಳಾಸ

ಕೇಳಿದಾಗ ಮುತ್ತುರಾಜು ಬಿನ್ ತಮ್ಮೇಗೌಡ, 35 ವರ್ಷ, ಮುತ್ತತ್ತಿ ಗ್ರಾಮ ಎಂದು ತಿಳಿಸಿರುತ್ತಾನೆ. ಪಂಚರು ಹಾಗೂ ಚಾಸಾ.6 ರವರ ಸಮಕ್ಷಮ ಸದರಿ ವ್ಯಕ್ತಿಯ ಬಳಿಯಿದ್ದ ಬ್ಯಾಗನ್ನು ಪರಿಶೀಲಿಸಿದಾಗ 90 ಎಂ ಎಲ್ ನ ಹೈವಾರ್ಡ್ಸ್ ಚಿಯರ್ಸ್ ವಿಸ್ಕಿಯ 43 ಟೆಟ್ರಾ ಪೌಚುಗಳು ಇದ್ದವು. ಅವುಗಳನ್ನು ಸಾಗಾಟ ಮಾಟಲು ಯಾವುದೇ ಪರವಾನಗಿ ಇಲ್ಲ ಎಂದು ಸದರಿ ವ್ಯಕ್ತಿ ತಿಳಿಸಿರುತ್ತಾರೆ.

**3.** ಪಂಚರ ಸಮಕ್ಷಮ ಚಾಸಾ.1 ರವರು ಸಂಜೆ 04.15 ರಿಂದ 05.00 ಗಂಟೆಯವರೆಗೆ ಮಹಜರು ಕ್ರಮ ಜರುಗಿಸುವ ಮೂಲಕ ಮದ್ಯದ ಪೌಚುಗಳು, ಬ್ಯಾಗ್ ಹಾಗೂ ಅಪಾಚೆ ವಾಹನವನ್ನು ಅಮಾನತ್ತು ಪಡಿಸಿರುತ್ತಾರೆ. ಅಮಾನತ್ತು ಪಡಿಸಿದ ಮುದ್ದೆ ಮಾಲುಗಳಲ್ಲಿ 1 ಪೌಚನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯ ಬ್ಯಾಗ್ ನಲ್ಲಿ ಹಾಕಿ ಚಾಸಾ.1 ರವರು ಅರಗಿನ ಸೀಲು ಹಾಕಿರುತ್ತಾರೆ. ನಂತರ ಮಾಲು ಮತ್ತು ಆರೋಪಿಯನ್ನು ಠಾಣೆಗೆ ತಂದು ಠಾಣಾಧಿಕಾರಿಗಳಿಗೆ ವರದಿ ನೀಡಿರುತ್ತಾರೆ. ನಾನು ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ. ಸದರಿ ಮುದ್ದೆ ಮಾಲಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಎಂ.ಓ 01 ಮತ್ತು 2 ಎಂದು ಗುರುತಿಸಲಾಗಿದೆ. ಆರೋಪಿಯಿಂದ ಅಮಾನತ್ತು ಪಡಿಸಿದ ಬೈಕನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (ಈ ಹಂತದಲ್ಲಿ ಆರೋಪಿಯು ಗೈರು ಹಾಜರಿದ್ದು ಸದರಿಯವರ ಗುರುತಿಸುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ).

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದಃ–**

**4.** ಮುತ್ತತ್ತಿ ಗ್ರಾಮದಿಂದ ಹಲಗೂರು 22 ಕಿ.ಮೀ ದೂರವಿದೆ. ಹಲಗೂರಿನಿಂದ ಮುತ್ತತ್ತಿಗೆ ಹೋಗಲು ಒಂದೇ ಮಾರ್ಗ ಎಂದರೆ ಸರಿ. ಹಲಗೂರು ಬಿಟ್ಟ ಸ್ವಲ್ಪ ದೂರದಲ್ಲಿ ಅರಣ್ಯ ಪ್ರದೇಶವಿದೆ ಎಂದರೆ ಸರಿ. ಅರಣ್ಯ ಪ್ರದೇಶದ ಪ್ರಾರಂಭದಲ್ಲಿ ಅರಣ್ಯ ಚೆಕ್ ಪೋಸ್ಟ್ ಇದೆ ಎಂದರೆ ಸರಿ. ಯಾವುದೇ ವಾಹನ ಸದರಿ ಚೆಕ್ ಪೋಸ್ಟ್ ಮೂಲಕ ಹೋದಾಗ ಸದರಿ ವಾಹನವನ್ನು ಪರಿಶೀಲಿಸಿದ ನಂತರ ಮುಂದಕ್ಕೆ ಹೋಗಬೇಕಾಗುತ್ತದೆ ಎಂದರೆ ಗೊತ್ತಿಲ್ಲ. ಸದರಿ ಚೆಕ್ ಪೋಸ್ಟ್ ನವರು ವ್ಯಕ್ತಿ ಹಾಗೂ ವಾಹನವನ್ನು ಪರಿಶೀಲನೆ ಮಾಡಿ ನಂತರ

ಮುಂದಕ್ಕೆ ಹೋಗಲು ಬಿಡುತ್ತಾರೆಂದರೆ ಸರಿ. ಆರೋಪಿಯು ಚೆಕ್ ಪೋಸ್ಟ್ ನಿಂದ 30 ಮೀಟರ್ ದೂರದಲ್ಲಿದ್ದ. ಮುತ್ತತ್ತಿ ಪ್ರವಾಸಿ ತಾಣ ಎಂದರೆ ಸರಿ. ಸದರಿ ಮಾರ್ಗದಲ್ಲಿ ಸಾಕಷ್ಟು ಗ್ರಾಮಗಳಿವೆ ಎಂದರೆ ಸರಿ. ಆದ್ದರಿಂದ ಸದರಿ ರಸ್ತೆಯಲ್ಲಿ ಸಾಕಷ್ಟು ಜನ ಓಡಾಡುತ್ತಾರೆಂದರೆ ಸರಿ. ಆರೋಪಿಯ ಬಳಿ ಬಿಳಿ ಬಣ್ಣದ ಬ್ಯಾಗ್ ಇದ್ದು ಅದರ ಮೇಲೆ ಯಾವ ಹೆಸರಿತ್ತು ಎಂದು ನೆನಪಿಲ್ಲ. ಚಾಸಾ.2 ಮತ್ತು 3 ರವರು ಟಿ.ಕೆ ಹಳ್ಳಿ ಮತ್ತು ಮಾರಾಗೌಡನಹಳ್ಳಿಯವರು.

**5.** ಟಿ ಕೆ ಹಳ್ಳಿ ಹಾಗೂ ಮಾರಗೌಡನಹಳ್ಳಿ ಗ್ರಾಮಗಳು ಹಲಗೂರಿನಿಂದ 7 - 8 ಕಿ.ಮೀ ದೂರದಲ್ಲಿದ್ದು ಮಳವಳ್ಳಿಯ ಕಡೆಗೆ ಬರುತ್ತವೆ ಎಂದರೆ ಸರಿ. ಆರೋಪಿಯಿಂದ ಅಮಾನತ್ತು ಪಡಿಸಿದ 43 ಪೌಚುಗಳನ್ನು ಹಾಗೂ ಬ್ಯಾಗನ್ನು ಪ್ರತ್ಯೇಕವಾಗಿ ಸೀಲು ಮಾಡಿಲ್ಲ ನಾನು ಮಹಜರಿಗೆ ಹಾಗೂ ಮುದ್ದೆ ಮಾಲುಗಳ ಮೇಲೆ ಸಹಿ ಮಾಡಿಲ್ಲ. ಆಗ ಸಹಿ ಮಾಡಲು ತೊಂದರೆಯಿರಲಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಆದ್ದರಿಂದ ಮಹಜರಿಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಮಹಜರು ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ವಾರಸುದಾರರು ಇಲ್ಲದಿರುವ ಆಸ್ತಿಯನ್ನು ಸೇರಿಸಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ನಾವು ದಾಳಿ ಮಾಡಲು ಹೋಗಿಲ್ಲ ಹಾಗೂ ಪಂಚರನ್ನು ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಎಂ.ಓ 01 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇವೆಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ

ಮಳವಳ್ಳಿ